**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. ನಂಃ 10007/2023**

**ಚಾಸಾ ಃ 47**

**ಪ್ರಾಸಾ ಃ 14**

| | | |
|---|---|---|
| **ಹೆಸರು** | ಃ | **ಡಾ॥** ಭಾರತಿ ಕೊಡ್ಡಾಪುರ |
| **ಗಂಡನ ಹೆಸರು** | ಃ | ರಮೇಶ |
| **ವಯಸ್ಸು** | ಃ | **38 ವರ್ಷ** |
| **ವೃತ್ತಿ** | ಃ | ಹಿರಿಯ ವೈಜ್ಞಾನಿಕ ಅಧಿಕಾರಿ, ಜೀವಶಾಸ್ತ್ರ ವಿಭಾಗ, ಎಫ್‌ಎಸ್‌ಎಲ್ ಮಡಿವಾಳ, ಬೆಂಗಳೂರು. |
| **ವಾಸ** | ಃ | ಬೆಂಗಳೂರು. |

**ಈ ದಿನ ದಿನಾಂಕಃ 14-03-2025 ರಂದು ಸಾಕ್ಷಿಯನ್ನು** ವಿಸಿ ಮೂಲಕ **ಕ್ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಕಳೆದ ಏಳುವರೆ ವರ್ಷಗಳಿಂದ ನಾನು ಬೆಂಗಳೂರಿನ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 30-01-2023 ರಂದು ರಾಜಾನುಕುಂಟೆ ಪೋಲೀಸ ಠಾಣೆಯ ಪೊಲೀಸರು ಅವರ ಠಾಣಾ ಮೊಕದ್ದಮೆ ಸಂಖ್ಯೆ 17/2023 ರ ಸಂಬಂಧಪಟ್ಟಂತೆ ಈ ಕೆಳಕಂಡ 22 ಸೀಲಾದ ವಸ್ತುಗಳನ್ನು ವಿಶ್ಲೇಷಣೆಗಾಗಿ ನಮ್ಮ ಇಲಾಖೆಯ ಸ್ವಾಗತ ವಿಭಾಗಕ್ಕೆ ನೀಡಿರುತ್ತಾರೆ. ಸದರಿ ವಸ್ತುಗಳನ್ನು ನಮ್ಮ ಸ್ವಾಗತ ವಿಭಾಗದವರು ಸ್ವೀಕರಿಸಿ ಕಚೇರಿ ಸಂಖ್ಯೆ ಎಫ್ ಎಸ್ ಎಲ್/ ಎಫ್.ಎಲ್.ಎಮ್.ಎಸ್/ ಬಿ ಎಸ್ /121/2023-2024 ರಡಿ ನೋಂದಣಿ ಪಡಿಸಿಕೊಂಡು ಅದೇ ದಿನ ವಿಶ್ಲೇಷಣೆಗಾಗಿ ನಮ್ಮ ಜೀವಶಾಸ್ತ್ರ ವಿಭಾಗಕ್ಕೆ ಕಳುಹಿಸಿರುತ್ತಾರೆ. ಸದರಿ ವಸ್ತುಗಳನ್ನು ತೆಗೆದುಕೊಂಡಿದ್ದು ನೋಡಲಾಗಿ ಅವುಗಳ ಮೇಲೀನ ಸೀಲು ಸುಸ್ಥಿಯಲ್ಲಿದ್ದು ತನಿಖಾ ಧಿಕಾರಿಗಳು ಕಳುಹಿಸಿದ ಮಾದರಿ ಸಹಿಯೊಂದಿಗೆ ಹೊಲಿಕೆಯಾಗಿ ಕಂಡುಬಂದಿರುತ್ತದೆ.

ಸದರಿ ವಸ್ತುಗಳನ್ನು ಬಿಚ್ಚಿ ನೋಡಲಾಗಿ ವಸ್ತು ಸಂಖ್ಯೆ -

1. ರಕ್ತದ ಹತ್ತಿ
2. ರಕ್ತದ ಹತ್ತಿ
3. ರಕ್ತದ ಹತ್ತಿ
4. ರಕ್ತಸಹಿತ ಮಣ್ಣು
5. ಮಾದರಿ ಮಣ್ಣು
6. ರಕ್ತದ ಕಲೆಯಿರುವ ಕಲ್ಲು
7. ರಕ್ತದ ಕಲೆಯಿರುವ ಕಲ್ಲು
8. ಮಾದರಿ ಮಣ್ಣು
9. ರಕ್ತದ ಕಲೆಯಿರುವ ಮಣ್ಣು ಮತ್ತು ಕಲ್ಲಿನ ಮಿಶ್ರಣ
10. ಚಾಕು
11. ಕೂಡುಗೋಲು
12. ಬ್ಲೂಟುತ್ ಏರಬಡ್
13. ಒಂದು ಜೊತೆ ಚಪ್ಪಲಿ
14. ಒಂದು ಶರ್ಟು
15. ಒಂದು ಜಿನ್ಸ್ ಪ್ಯಾಂಟ್
16. ಒಂದು ಪುಲ್ ಓವರ್
17. ಒಂದು ಟಾಪು

18. ಒಂದು ಟ್ರಾಕ್ ಪ್ಯಾಂಟು

19. ಒಂದು ಪೇಟಿ ಕೋಟು.

20. ಒಂದು ಬ್ರಾ

21. ಒಂದು ನಿಕ್ಕರ್

22. ಮಾದರಿ ರಕ್ತ

3. ನಾನು ಮೇಲೆ ಹೇಳಿದ ವಸ್ತುಗಳನ್ನು ಪ್ರಥಮವಾಗಿ ರಾಸಾಯನಿಕ ಪರೀಕ್ಷೆಗೆ ಒಳಪಡಿಸಿರುತ್ತೇನೆ. ವಸ್ತು ಸಂಖ್ಯೆ 1 ರಿಂದ 4, 6, 7, 9 ರಿಂದ 21 ರ ವಸ್ತುಗಳ ಮೇಲೆ ರಕ್ತದ ಕಲೆಗಳು ಕಂಡುಬಂದಿರುತ್ತವೆ. ವಸ್ತ ಸಂಖ್ಯೆ 5 ಮತ್ತು 8 ರಲ್ಲಿ ಯಾವುದೇ ರಕ್ತದ ಕಲೆಗಳು ಕಂಡುಬಂದಿರುವುದಿಲ್ಲ. ಆದ್ದರಿಂದ ಮೇಲೆ ಹೇಳಿದ ವಸ್ತುಗಳ ಮೇಲೆ ರಕ್ತದ ಕಲೆಗಳು ಕಂಡುಬಂದಿದ್ದರಿಂದ ಅದನ್ನು ನಿರ್ದಿಷ್ಟಪಡಿಸಲು ಬೆಂಜಡೈಯನ್ ಮತ್ತು ತಾಕಯಾಮ ಪರೀಕ್ಷೆಗೆ ಒಳಪಡಿಸಿದ್ದು ವಸ್ತು ಸಂಖ್ಯೆ 1 ರಿಂದ 4, 6, 7, 9, 10, 13 ರಿಂದ 20 ರ ವಸ್ತುಗಳ ಮೇಲಿನ ರಕ್ತದ ಕಲೆಗಳು ಮಾನವನ ರಕ್ತವಾಗಿದ್ದು ಅದು ಓ ಗುಂಪಿಗೆ ಸೇರಿರುತ್ತದೆಂಬುದು ಕಂಡುಬಂದಿರುತ್ತದೆ.

4. ವಸ್ತು ಸಂಖ್ಯೆ 11, 12 ಮತ್ತು 21 ರ ಮೇಲೆ ಸಾಕಷ್ಟು ರಕ್ತದ ಕಲೆಗಳು ಕಂಡುಬಾರದೆ ಇರುವುದರಿಂದ ರಕ್ತದ ಗುಂಪನ್ನು ನಿರ್ಣಯಿಸಲು ಸಾಧ್ಯವಾಗಿರುವುದಿಲ್ಲ.

5. ವಸ್ತು ಸಂಖ್ಯೆ 22 ರಲ್ಲಿನ ಮಾದರಿ ರಕ್ತವು ಕೆಟ್ಟು ಹೋಗಿತ್ತು ಅಥವಾ ನಾಶವಾಗಿತ್ತು.

6. ಪರೀಕ್ಷಿಸಿದ ನಂತರ 1 ರಿಂದ 222 ನೇ ವಸ್ತುಗಳನ್ನು ಪುನಃ ಮರುಪ್ಯಾಕ್ ಮಾಡಿ ನಮ್ಮ ಜೀವಶಾಸ್ತ್ರ ವಿಭಾಗದ ಮೋಹರು ಹಾಕಿ ಕಚೇರಿಯ ಮೋಹರಿನೊಂದಿಗೆ ಸೀಲು ಮಾಡಿ ಸಂಬಂಧಿಸಿದ ವಿಭಾಗಕ್ಕೆ ನೀಡಿದ್ದು ನಂತರ ಸದರಿ ವಿಭಾಗದಿಂದ ಸಂಬಂಧಪಟ್ಟ ಠಾಣೆಯವರು ವಾಪಸ್ಸು ಪಡೆದುಕೊಂಡಿರುತ್ತಾರೆ.

7. ನನ್ನ ಅಭಿಪ್ರಾಯ ವರದಿಯನ್ನು ನಮ್ಮ ಇಲಾಖೆಯ ನಿರ್ದೇಶಕರ ಮೇಲರುಜುವಿನೊಂದಿಗೆ ಎಫ್.ಎಲ್.ಎಮ್.ಎಸ್. ತಂತ್ರಾಂಶದ ಮೂಲಕ ಸಂಬಂಧಪಟ್ಟ ತನಿಖಾಧಿಕಾರಿಗಳಿಗೆ ಕಳುಹಿಸಲಾಗಿರುತ್ತದೆ. ನಾನು ಕಳುಹಿಸಿದ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-30 ಎಂದು ಗುರುತಿಸಲಾಯಿತು. ಅದರೊಂದಿಗೆ ಫಾರ್ ವರ್ಡಿಂಗ್ ಲೆಟರ್ ನ್ನು ನೋಡಿ ಗುರುತಿಸುತ್ತೇನೆ. ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ಅದು ಡಿಜಿಟಲ್ ಸಹಿ ಆಗಿರುತ್ತದೆ. 2 ಮಾದರಿ ಮೊಹರುಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-31 ಮತ್ತು ನಿಪಿ-32 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಕ್ರಮವಾಗಿ 31(ಎ) ಮತ್ತು 32 (ಎ) ಎಂದು ಗುರುತಿಸಲಾಯಿತು.

8. ನಾನು ಪರೀಕ್ಷಿಸಿದ ವಸ್ತುಗಳನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ವಸ್ತು ಸಂಖ್ಯೆ 1 ರಿಂದ 21 ನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ಮು.ಮಾ. 1 ರಿಂದ 6, 13, 8, 7, 9 ರಿಂದ 12, 16 ರಿಂದ 23 ಎಂದು ಗುರುತಿಸಲಾಗಿರುತ್ತದೆ.

**ವಾಟೀ ಸವಾಲು ಆರೋಪಿತರ ಪರ ವಕೀಲರು ಗೈರುಹಾಜರಿರುತ್ತಾರೆ ಯಾರು ಪ್ರತಿನಿಧಿಸಿರುವುದಿಲ್ಲ ಆದ್ದರಿಂದ ವಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.**

**(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ